International Journal of Kannada Research
www.kannadajournal.com

ISSN: 2454–5813
IJKR 2025; 11(4): 01-05
© 2025 IJKR
www.kannadajournal.com
Received: 01-08-2025
Accepted: 05-09-2025

**Pareekshith B Vashishta**
Research Scholar, Department of Music, KSGH Music and Performing Arts University, Mysuru, Karnataka, India

**Corresponding Author:**
**Pareekshith B Vashishta**
Research Scholar, Department of Music, KSGH Music and Performing Arts University, Mysuru, Karnataka, India

# ಭಾರತೀಯ ಸಂಸ್ಕಾರಗಳು ಮತ್ತು ಧಾರ್ಮಿಕ ಆಚರಣೆಗಳಲ್ಲಿ ಸಂಗೀತ

**Pareekshith B Vashishta**

**DOI:** https://www.doi.org/10.22271/24545813.2025.v11.i4a.1170

**ಸಾರಾಂಶ**

ಭಾರತೀಯ ಸಂಸ್ಕೃತಿಯಲ್ಲಿ ಕಲೆಗಳಿಗೆ ಮುಖ್ಯವಾದ ಸ್ಥಾನವಿದೆ. ಕಲೆಗಳ ಪ್ರೌಢವಾದ ಬೆಳವಣಿಗೆ ಮತ್ತು ಪ್ರಯೋಗ ಭಾರತೀಯ ನಾಗರಿಕತೆಯ ವೈಶಿಷ್ಟ್ಯಗಳಲ್ಲೊಂದು. ಅರವತ್ತನಾಲ್ಕು ಕಲೆಗಳ ಪ್ರಸ್ತಾಪ ಭಾರತೀಯ ಕಲಾ ಪರಂಪರೆಯ ವಿಸ್ತಾರದ ಅರಿವನ್ನು ಮೂಡಿಸುತ್ತದೆ. ಕಲೆಗಳಲ್ಲಿ ಆಶುವಾದದ್ದು ಮತ್ತು ತತ್ ಕ್ಷಣ ಆನಂದವನ್ನು ಉಂಟುಮಾಡುವಂತಹುದೂ ಆದ ಸಂಗೀತವಂತೂ ಭಾರತೀಯ ಪರಂಪರೆಯ ಜೀವಾಳವೇ ಆಗಿದೆ. ಭಾರತೀಯ ಸಂಸ್ಕೃತಿಯ ಮೂಲ ಬೇರುಗಳಾದ ವೇದಗಳಿಂದಲೇ ಭಾರತೀಯ ಸಂಗೀತದ ಉಗಮವಾಗಿದೆ ಎಂದು ವಿದ್ವದಭಿಪ್ರಾಯ. ಇದಕ್ಕೆ ಪ್ರಮಾಣವೂ ವೇದಗಳಲ್ಲೇ ದೊರೆಯುತ್ತದೆ. ಸಂಗೀತವು ಭಾರತೀಯರ ಪ್ರತಿಯೊಂದು ಆಚರಣೆಗಳಲ್ಲಿಯೂ ಹಾಸುಹೊಕ್ಕಾಗಿರುವುದನ್ನು ಪ್ರತ್ಯಕ್ಷವಾಗಿಯೇ ಇಂದೂ ಕಾಣುತ್ತೇವೆ. ಭಾರತೀಯ ಪದ್ಧತಿಯಲ್ಲಿ ಸಮಷ್ಟಿಯ ಕರ್ಮಗಳು ಮತ್ತು ವ್ಯಕ್ತಿಗತ ಅಧ್ಯಾತ್ಮಿಕ ಸಾಧನೆಗಳೆರಡೂ ಪ್ರಾಮುಖ್ಯವನ್ನು ಹೊಂದಿವೆ.

ಸ್ಥೂಲವಾಗಿ ಭಾರತೀಯ ಸಾಂಪ್ರದಾಯಿಕ ಕ್ರಿಯೆಗಳನ್ನು ಶ್ರೌತ ಕರ್ಮಗಳು, ಸ್ಮಾರ್ತ ಕರ್ಮಗಳು ಮತ್ತು ಪುರಾಣೋಕ್ತ ಕರ್ಮಗಳೆಂದು ವಿಂಗಡಿಸಬಹುದು. ವೇದೋಕ್ತವಾದ ಯಜ್ಞಯಾಗಾದಿಗಳು ಶ್ರೌತಕರ್ಮಗಳು, ಸ್ಮೃತಿಗಳಲ್ಲಿ ಉಕ್ತವಾದ ಷೋಡಶ ಕರ್ಮಗಳು ಮುಂತಾದವುಗಳು ಸ್ಮಾರ್ತ ಕರ್ಮಗಳು ಮತ್ತು ವಿವಿಧ ಕಲ್ಪ ಮತ್ತು ಪುರಾಣಗಳಲ್ಲಿ ಬರುವ ವ್ರತಾದಿಗಳು ಪುರಾಣೋಕ್ತ ಕರ್ಮಗಳೆನ್ನಬಹುದು. ಶ್ರೌತಕರ್ಮಗಳಾದ ಸೋಮಯಾಗಗಳಲ್ಲಿಯೂ, ಸ್ಮಾರ್ತಕರ್ಮಗಳಾದ ವಿವಾಹಾದಿ ಸಂಸ್ಕಾರಗಳಲ್ಲಿಯೂ, ಪುರಾಣೋಕ್ತ ಹಬ್ಬ-ಹರಿದಿನಗಳಲ್ಲಿಯೂ ಸಂಗೀತದ ಬಳಕೆ ಅವಿಚ್ಛಿನ್ನವಾಗಿ ನಡೆದು ಬಂದಿದೆ. ವ್ಯಕ್ತಿಗತ ಅಧ್ಯಾತ್ಮಿಕ ಶ್ರೇಯವು ಸಾಧಿತವಾದಾಗಲೂ ದಶವಿಧ ನಾದಗಳ ಸಾಕ್ಷಾತ್ಕಾರವಾಗುತ್ತದೆ. ಶಿವಯೋಗದ ಸಾಧನೆಯಲ್ಲಿಯೂ ಈ ದಶವಿಧ ನಾದಗಳ ಉಲ್ಲೇಖವಿದೆ. ಹೀಗೆ ಭಾರತೀಯ ದರ್ಶನದಲ್ಲಿ ಸಂಗೀತಕ್ಕೆ ಅಮೂಲ್ಯವಾದ ಮಹತ್ವವಿದೆ.

**ಪ್ರಮುಖ ಪದಗಳು:** ಸಂಸ್ಕಾರ, ನಾದ, ಸಾಮವೇದ, ಸಂಪ್ರದಾಯ

## ಪೀಠಿಕೆ

ಭಾರತೀಯ ಜ್ಞಾನ ಪರಂಪರೆಯಲ್ಲಿ ನಾದ ಮತ್ತು ಮುಂದುವರೆದು ಸಂಗೀತಕ್ಕೆ ಉತ್ಕೃಷ್ಟವಾದ ಸ್ಥಾನವಿದೆ. ನಾದದ ಕುರಿತಾದ ಹಲವಾರು ಶ್ಲೋಕಗಳನ್ನು ಇದಕ್ಕೆ ಉದಾಹರಿಸಬಹುದು.

॥ ನಾದೇನ ವ್ಯಜ್ಯತೇವರ್ಣಃ ಪದಂ ವರ್ಣಾತ್ಪದಾದ್ವಚಃ
ವಚಸೋ ವ್ಯವಹಾರೋಽಯಂ ನಾದಾಧೀನಮತೋ ಜಗತ್ ॥

ಎಂಬ ಶ್ಲೋಕವು ನಾದದ ಮಹತ್ವವನ್ನು ವರ್ಣಿಸುತ್ತದೆ. ನಾದದಿಂದ ವರ್ಣವೂ, ವರ್ಣದಿಂದ ಪದವೂ, ಪದದಿಂದ ಮಾತೂ, ಮಾತಿನಿಂದ ಲೋಕವ್ಯವಹಾರವು ನಡೆಯುವುದರಿಂದ ಜಗತ್ತೇ ನಾದಾಧೀನ ಎಂಬುದು ಶಾರ್ಙ್ಗದೇವನ ಮತ.

ಶಾರ್ಙ್ಗದೇವನು ತನ್ನ ಸಂಗೀತರತ್ನಾಕರದ ಸ್ವರಗತಾಧ್ಯಾಯದ ನಾದಸ್ಥಾನಶ್ರುತಿಸ್ವರಜಾತಿಕುಲದೈವತರ್ಷಿಚ್ಛಂದೋರಸ ಪ್ರಕರಣದ ಆರಂಭದಲ್ಲಿಯೇ ನಾದಬ್ರಹ್ಮಕ್ಕೆ ನಮಿಸುತ್ತಾನೆ.

॥ ಚೈತನ್ಯಂ ಸರ್ವಭೂತಾನಾಂ ವಿವೃತ್ತಂ ಜಗದಾತ್ಮನಾ
ನಾದಬ್ರಹ್ಮತದಾನಂದಂ ಅದ್ವಿತೀಯಮುಪಾಸ್ಮಹೇ ॥
॥ ನಾದೋಪಾಸನಯಾ ದೇವಾ ಬ್ರಹ್ಮವಿಷ್ಣುಮಹೇಶ್ವರಾಃ
ಭವಂತ್ಯುಪಾಸಿತಾನೂನಂ ಯಸ್ಮಾದೇತೇ ತದಾತ್ಮಕಾಃ ॥

ಈ ರೀತಿಯಾದ ನಾದಪರವಾದ ಶ್ಲೋಕಗಳನ್ನು ಮತಂಗನ ಬೃಹದ್ದೇಶಿಯಲ್ಲಿಯೂ ಕಾಣಬಹುದು.

॥ ನಾದರೂಪಃ ಸ್ಮೃತೋ ಬ್ರಹ್ಮಾ ನಾದರೂಪೋ ಜನಾರ್ದನಃ
ನಾದರೂಪಾ ಪರಾಶಕ್ತಿರ್ನಾದರೂಪೋ ಮಹೇಶ್ವರಃ ॥

ಭಾರತದಲ್ಲಿ ನಾದೋಪಾಸನೆಗಿದ್ದ ಮಹತ್ವವನ್ನು ಇವು ತಿಳಿಸುತ್ತವೆ. ಅನಾದಿಕಾಲದಿಂದಲೂ ನಾದದ ಮೂಲಕ ಆನಂದಪ್ರಾಪ್ತಿಯ ಜೊತೆಜೊತೆಗೆ ಸಂಗೀತದ ಧಾತು–ಮಾತುವನ್ನು ಕರ್ಮಗಳಲ್ಲಿ ಬಳಸುತ್ತಿದ್ದುದು ಕಂಡುಬರುತ್ತದೆ. ಶಾಸ್ತ್ರೀಯವಾದ, ಚೌಕಟ್ಟಿನಿಂದ ಕೂಡಿದ ಸಂಗೀತದ ಪ್ರತಿಯೊಂದು ಸ್ವರದ ಪ್ರಯೋಜನ, ಅದಕ್ಕೆ ಸಂಬಂಧಿಸಿದ ದೇವತೆ, ಋಷಿ ಮುಂತಾದವುಗಳನ್ನು ಕೋಹಲಮತವೇ ಮುಂತಾದ ಸಂಗೀತ ಶಾಸ್ತ್ರ ಗ್ರಂಥಗಳು ವಿವರಿಸುತ್ತವೆ. ಧಾರ್ಮಿಕ ಕರ್ಮಗಳ ಮತ್ತು ಅದಕ್ಕೆ ಸಂಬಂಧಿಸಿದ ದೇವತೆಗಳ ಅನುಷ್ಠಾನಕ್ಕೆ ಸಂಗೀತವನ್ನು ಬಳಸುವುದನ್ನು ಮುದ್ದುಸ್ವಮಿ ದೀಕ್ಷಿತರ ಕೃತಿಪ್ರಯೋಗಗಳಲ್ಲಿಯೂ ಕಾಣಬಹುದು. ಹೀಗೆ ವೇದಕಾಲದಿಂದಲೂ ತ್ರಿವರ್ಗವನ್ನು ಮತ್ತು ಅಪವರ್ಗವನ್ನೂ ಸಾಧಿಸಲು ಸಂಗೀತವು ಸಾಧುವಾದ ಮಾರ್ಗವಾಗಿದೆ. ಇದನ್ನು ಯಾಜ್ಞವಲ್ಕ್ಯರೂ ತಮ್ಮ ಯಾಜ್ಞವಲ್ಕ್ಯಸ್ಮೃತಿಯ ಪ್ರಾಯಶ್ಚಿತ್ತಾಧ್ಯಾಯದ ಯತಿಧರ್ಮಪ್ರಕರಣದಲ್ಲಿ ಅನುಮೋದಿಸಿದ್ದಾರೆ.

॥ ವೀಣಾವಾದನತತ್ತ್ವಜ್ಞಃ ಶ್ರುತಿಜಾತಿವಿಶಾರದಃ
ತಾಲಜ್ಞಾಶ್ಚಾಪ್ರಯಾಸೇನ ಮೋಕ್ಷಮಾರ್ಗಂ ನಿಯಚ್ಛತಿ ॥

ನಾದವಿಲ್ಲದೇ ಗೀತವಿಲ್ಲ, ನಾದವಿಲ್ಲದೇ ಸ್ವರವೂ ಇಲ್ಲ. ನಾದವಿಲ್ಲದೇ ವೃತ್ತವಿಲ್ಲ, ಹಾಗಾಗಿ ಜಗತ್ತು ನಾದಾಧೀನವೆಂದು ಶಾಸ್ತ್ರಕಾರರು ಸ್ಪಷ್ಟವಾಗಿ ಹೇಳಿದ್ದಾರೆ. ಗೀತದ ಉಲ್ಲೇಖ ನಮಗೆ ಋಗ್ವೇದದಲ್ಲಿಯೇ ದಕ್ಕುತ್ತದೆ. ಋಗ್ವೇದಕಾಲದಿಂದಲೇ ವಿಶದವಾದ ಸಂಗೀತದ ಮಾರ್ಗವಿದ್ದುದಾಗಿ ತಿಳಿದುಬರುತ್ತದೆ. ಋಗ್ವೇದದಲ್ಲಿ ನಮಗೆ ಉದಾತ್ತ, ಅನುದಾತ್ತ ಮತ್ತು ಸ್ವರಿತಗಳೆಂಬ ಸ್ವರಗಳಿದ್ದರೆ, ಸಾಮವೇದದಲ್ಲಿ ಸಪ್ತಸ್ವರಗಳಿವೆ. ಇಂದಿನ ಸಂಗೀತದ ಪಂಚಮ, ಮಧ್ಯಮ, ಗಾಂಧಾರ, ಋಷಭ, ಷಡ್ಜ, ನಿಷಾದ ಮತ್ತು ಧೈವತಗಳಿಗೆ ಸಂವಾದಿಯಾಗಿ ಕ್ರುಷ್ಟ, ಪ್ರಥಮ, ದ್ವಿತೀಯ, ತೃತೀಯ, ಚತುರ್ಥ, ಪಂಚಮ ಮತ್ತು ಷಷ್ಠ ಎಂಬ ಏಳು ಸ್ವರಗಳಿದ್ದುದಾಗಿ ತಿಳಿದುಬರುತ್ತದೆ. ದೇಶೀ ಸಂಗೀತವೂ ಮಾರ್ಗ ಸಂಗೀತದಷ್ಟೇ ಪ್ರಾಚೀನವಾದುದು ಎನ್ನುವುದು ಅತಿಶಯೋಕ್ತಿಯಲ್ಲ. ಹಲವಾರು ರಾಗಗಳಲ್ಲಿ ಹರಡಿರುವ ದೇಶೀ ಸಂಗೀತವು ಭಾರತದ ಜನಪದದ ಒಂದು ಭಾಗವೇ ಆಗಿದೆ. ಸಂಪ್ರದಾಯ ಗೀತೆಗಳ ರೂಪದಲ್ಲಿಯೂ, ಸೋಬಾನೆ ಹಾಡುಗಳ ರೂಪದಲ್ಲಿಯೂ ಇವು ಜನಜನಿತವಾಗಿವೆ.

**ಶ್ರೌತಕರ್ಮಗಳಲ್ಲಿ ಸಂಗೀತ**

ಭಾರತೀಯ ಚೈತನ್ಯದ ಸೆಲೆಯಾದ ವೇದಗಳಲ್ಲಿ ನಮಗೆ ಶಾಸ್ತ್ರೀಯ ಚೌಕಟ್ಟಿನ ಸಂಗೀತದ ಪರಿಚಯವಾಗುತ್ತದೆ. ಸ್ವರಸಮೂಹವು ಋಗ್ವೇದದಿಂದಲೇ ಮೊದಲುಗೊಂಡು ಸಾಮದಲ್ಲಿ ತನ್ನ ಪೂರ್ಣ ಪ್ರಭೆಯನ್ನು ತೋರಿಸುತ್ತದೆ. ಸಾ + ಅಮ ಎಂಬುದಾಗಿ ಸಾಮ ಎಂದಾಗಿದೆ. ಯಜ್ಞಕರ್ಮವು ವೇದಗಳ ಪ್ರಮುಖ ಭಾಗಗಳಲ್ಲಿ ಒಂದು. ಯಜ್ಞದಲ್ಲಿ ಹೋತೃವು ಋಗ್ವೇದದ ಋಕ್ಕುಗಳನ್ನು ಉಲಿದರೆ, ಅಧ್ವರ್ಯುವಿನ ಆಧ್ವರ್ಯದಲ್ಲಿಯೇ ಯಜ್ಞ ಸಾಗುತ್ತದೆ. ಉದ್ಗಾತೃವಿಗೆ ಸಾಮಗಾನದ ಜವಾಬ್ದಾರಿಯಾದರೆ ಬ್ರಹ್ಮಸ್ಥಾನವು ಮೇಲ್ವಿಚಾರಣೆಗಾಗಿ ಇದೆ. ಋಕ್ಕುಗಳಲ್ಲಿಯೂ ಶಸ್ತ್ರ ಹಾಗೂ ಸ್ತೋತ್ರವೆಂಬ ವಿಭಾಗವು ಅದರ ಗಾನಾರ್ಹತೆಯ ಮೇಲೆ ಉಂಟಾಗಿದೆ. ಸಾಮಗಾನಕ್ಕೆ ಅರ್ಹವಾದ ಋಕ್ಕುಗಳನ್ನು ಸ್ತೋತ್ರವೆಂದೂ, ಸಾಮಗಾನಸ್ವರಗಳಿರದ ಋಕ್ಕುಗಳನ್ನು ಶಸ್ತ್ರವೆಂದೂ ಕರೆಯಲಾಗಿದೆ. ಯಜ್ಞಗಳಲ್ಲಿ ಮುಖ್ಯವಾದ ಸೋಮಯಾಗದಲ್ಲಿ ಸಾಮಗಾನವು ಕಂಡುಬರುತ್ತದೆ. ಸೋಮಯಾಗದಲ್ಲಿ ಏಳು ಪ್ರಭೇದಗಳಿದ್ದು, ಅವುಗಳು ಅಗ್ನಿಷ್ಟೋಮ, ಅತ್ಯಗ್ನಿಷ್ಟೋಮ, ಉಕ್ಥ್ಯ, ಷೋಡಶೀ, ಅತಿರಾತ್ರ, ಅಪ್ತೋರ್ಯಾಮ ಹಾಗೂ ವಾಜಪೇಯ. ಇವುಗಳ ಪ್ರಯೋಗಗಳಲ್ಲಿ ಸಾಮಗಾನದ ಯಥೇಚ್ಛ ಪ್ರಯೋಗವನ್ನು ಕಾಣಬಹುದು. ಸೋಮವನ್ನು ಹಿಂಡಿ ತೆಗೆಯುವ ದಿನದ (ಸುತ್ಯಾದಿನ) ಪ್ರಾತಃಕಾಲದಲ್ಲಿ ಸೂರ್ಯೋದಯಕ್ಕೆ ಮುಂಚೆ ಹೇಳುವ ಪ್ರಾತರನುವಾಕಮಂತ್ರಗಳಲ್ಲಿ ಒಂದಷ್ಟು ಮಂತ್ರಗಳು ಉಪಾಂಶು ಹಾಗೂ ಮಂದ್ರ ಸ್ವರದಲ್ಲಿ ಹೇಳಬೇಕೆಂಬ ವಿಧಿಯಿದೆ. ಋಗ್ವೇದದ ಪ್ರಥಮ ಮಂಡಲದ ಮೂರನೇ ಅನುವಾಕದ ಹತ್ತನೇ ಸೂಕ್ತವು ಇಂದ್ರನಿಗೆ ಸಂಬಂಧಿಸಿದ್ದು, ಅದರ ಮೊದಲನೇ ಋಕ್ಕಿನಲ್ಲಿಯೇ **"ಗಾಯಂತಿ"** ಎಂಬ ಶಬ್ದವನ್ನು ಕಾಣಬಹುದು.

"ಗಾಯಂತಿ ತ್ವಾ ಗಾಯತ್ರಿಣೋಽರ್ಚಂತ್ಯರ್ಕಮರ್ಕಿಣಃ ।
ಬ್ರಹ್ಮಣಸ್ತ್ವಾ ಶತಕ್ರತ ಉದ್ವಂಶಮಿವ ಯೇಮಿರೇ ॥"

ಇಲ್ಲಿ "ಗಾಯತ್ರಿಣಃ" ಅಂದರೆ ಸಾಮವೇದಗಾನ ಮಾಡುವ ಉದ್ಗಾತೃಗಳೆಂಬ ಋತ್ವಿಜರು. ಅಗ್ನಿಷ್ಟೋಮ ಯಾಗದಲ್ಲಿ ಬೃಹತ್ಸಾಮ ಎಂಬ ಸಾಮಮಂತ್ರಗಳು ಗಾನಮಾಡಲ್ಪಡಬೇಕು. ಋಗ್ವೇದದಿಂದಲೇ ಸೋಮಯಾಗಗಳಲ್ಲಿ ಸಾಮಗಾನವನ್ನು ಮಾಡಬೇಕೆಂಬುದು ತಿಳಿಯುತ್ತದೆ. ಎಂಟನೇ ಮಂಡಲದ ಏಳನೇ ಅನುವಾಕದ ಅರವತ್ತಾರನೇ ಸೂಕ್ತದ ಮೊದಲನೇ ಋಕ್ಕಿನಲ್ಲಿ ಇದಕ್ಕೆ ಪುರಾವೆ ದೊರೆಯುತ್ತದೆ.

"ತರೋಭಿರ್ವೋ ವಿದದ್ವಸುಮಿಂದ್ರಂ ಸಬಾಧ ಊತಯೇ ।
ಬೃಹದ್ಗಾಯಂತಃ ಸುತಸೋಮೇ ಅಧ್ವರೇ ಹುವೇ ಭರಂ ನ ಕಾರಿಣಂ ॥"

ಹಿಂಡಿರುವ ಸೋಮಪೂರಿತವಾದ ಯಜ್ಞದಲ್ಲಿ ಇಂದ್ರನನ್ನು ಆಹ್ವಾನಿಸಲು ಬೃಹತ್ಸಾಮವನ್ನು ಗಾನರೂಪದಲ್ಲಿ ಪಠಿಸುತ್ತಾ ಪೂಜಿಸಬೇಕೆಂದು ಈ ಋಕ್ಕು ಗುರುತು ಮಾಡಿಕೊಡುತ್ತದೆ. ಸೋಮಯಾಗ ಮಾಡುವಾಗ ಸುತ್ಯಾದಿನದಂದು ಪ್ರಾತಸ್ಸವನ, ಮಾಧ್ಯಂದಿನ ಸವನ ಹಾಗೂ ತೃತೀಯಸವನಗಳಲ್ಲಿ ಹನ್ನೆರಡು ಸ್ತೋತ್ರಗಳನ್ನೂ ಹನ್ನೆರಡು ಶಸ್ತ್ರಗಳನ್ನೂ ಪಠಿಸಲಾಗುತ್ತದೆ. ಹೀಗೆ ಸೋಮಯಾಗದ ಅವಿಭಾಜ್ಯ ಅಂಗವಾಗಿ ಸಾಮಗಾನವು ಸಾಗುತ್ತದೆ. ಇನ್ನು ವಾದನದ ವಿಷಯವಾಗಿಯೂ ವೇದಗಳಲ್ಲಿ ಉಲ್ಲೇಖ ದೊರೆಯುತ್ತದೆ. ಹಲವಾರು ಬಗೆಯ ವೀಣೆಗಳ ಪ್ರಸ್ತಾಪವು ಋಗ್ವೇದಕಾಲದಿಂದಲೂ ಸಿಕ್ಕುತ್ತದೆ. ತಂತೀವಾದ್ಯಗಳೆಲ್ಲವನ್ನೂ ಸಾಮಾನ್ಯವಾಗಿ ವೀಣೆಯೆಂದೇ ಕರೆಯಲಾಗುತ್ತಿತ್ತು. ಮರುತ್ತುಗಳು ವೀಣೆಯನ್ನು ನುಡಿಸುತ್ತಿದ್ದುದಾಗಿ ಋಗ್ವೇದದಿಂದ ತಿಳಿಯುತ್ತದೆ. ಋಗ್ವೇದದ ಒಂದನೇ ಮಂಡಲದ ಹದಿನಾಲ್ಕನೇ ಅನುವಾಕದ ಎಂಬತ್ತೈದನೆಯ ಸೂಕ್ತದ ಹತ್ತನೇ ಋಕ್ಕಿನಲ್ಲಿ ಮರುತ್ತುಗಳ ನೂರಾರು ತಂತಿಯುಳ್ಳ "ವಾಣ"ದ ಪ್ರಸ್ತಾಪವಿದೆ. ಎಂಟನೇ

ಮಂಡಲದ ಮೂರನೇ ಅನುವಾಕದ ಇಪ್ಪತ್ತನೇ ಸೂಕ್ತದ ಎಂಟನೇ ಋಕ್ಕಿನಲ್ಲೂ ಮರುತ್ತುಗಳ ವಾಣದ ಪ್ರಸ್ತಾಪವಿದೆ.

"ಗೋಭಿರ್ವಾಣೋ ಅಜ್ಯತೇ ಸೋಭರೀಣಾಂ ರಥೇ ಕೋಶೇ ಹಿರಣ್ಯಯೇ ।
ಗೋಬಂಧವಃ ಸುಜಾತಾಸ ಇಷೇ ಭುಜೇ ಮಹಾಂತೋ ನಃ ಸ್ಪರಸೇ ನು ॥"

ಪವಮಾನಸೋಮನನ್ನು ಸಂತೃಪ್ತಿಗೊಳಿಸಲು ಯಾಜ್ಞಿಕರ ಸದಸ್ಸು ಏಕಕಾಲಕ್ಕೆ ವಾಣವನ್ನು ನುಡಿಸುವ ವಿಧಿಯಿದೆ. ಯಜ್ಞಕರ್ಮದಲ್ಲಿ ಉದ್ಗಾತೃವು ಗಾನದ ಜೊತೆಗೆ ವೀಣಾವಾದನವನ್ನೂ ಮಾಡಬೇಕೆಂಬ ನಿಯಮ ಕೆಲವು ಕಲ್ಪಸೂತ್ರಗಳಲ್ಲಿ ಕಾಣಬರುತ್ತವೆ. ವೀಣೆಯನ್ನು ನುಡಿಸುವುದಲ್ಲದೇ, ಉದ್ಗಾತೃ ಮತ್ತು ಯಜಮಾನರಿಬ್ಬರೂ ಮೂರು ಗಾಥೆಗಳನ್ನು ರಚಿಸಿ ಹಾಬೇಕೆಂಬ ನಿಯಮವಿದ್ದಂತೆ ತೋರುತ್ತದೆ.
"ವೀಣೆಯನ್ನು ನುಡಿಸುತ್ತಾ ಹಾಡುವುದನ್ನು ಬ್ರಾಹ್ಮಣನೂ ಇನ್ನೊಬ್ಬ ರಾಜನೂ ಕೂಡಿ ಮಾಡಬಹುದೆಂಬ, ಬ್ರಾಹ್ಮಣನು ಪ್ರಾತಃಕಾಲದಲ್ಲಿ ದಾನಸ್ತುತಿ ಮತ್ತು ಯಜಮಾನಸ್ತುತಿಯ ಸಾಮಗಳನ್ನೂ, ವಿಜಯ ಇವುಗಳ ಸ್ತುತಿಯನ್ನೊಳಗೊಂಡ 'ಇತ್ಯದದಾ ಇತ್ಯಯಜಥಾ ಇತ್ಯಪಚ' ಎಂದು ಮೊದಲಾಗುವ ಮಂತ್ರಗಾನವನ್ನೂ, ಕ್ಷತ್ರಿಯನು ರಾತ್ರಿಯವೇಳೆ ಶೌರ್ಯ, ಪರಾಕ್ರಮ, ವಿಜಯ-ಇವುಗಳ ಸ್ತುತಿಯನ್ನೂ 'ಇತ್ಯಜಿನಾ ಇತ್ಯ ಯುದ್ಧಸ್ಯ ಇತ್ಯಮು ಸಂಗ್ರಾಮಮಹಿನ್' ಎಂಬ ಮಂತ್ರಗಾನವನ್ನು ಮಾಡಬೇಕೆಂಬ ಇತರ ವಿವರಗಳೂ ಅಲ್ಲಿ ದೊರೆಯುತ್ತವೆ." (ಧಾರ್ಮಿಕ ಸಂಸ್ಕಾರಗಳಲ್ಲಿ ಸಂಗೀತ, ಪುಟ 78, ಮಹಾಮಹೋಪಾಧ್ಯಾಯ ಡಾ. ರಾ. ಸತ್ಯನಾರಾಯಣ)
ಹೀಗೆ ಶ್ರೌತಕರ್ಮಗಳುದ್ದಕ್ಕೂ ನಾದದ, ನಾದವಿದ್ಯೆಯ ಬೆಂಬಲ ಮತ್ತು ಸಹಕಾರಗಳನ್ನು ಕಾಣುತ್ತೇವೆ. ಯಜ್ಞಕರ್ಮಗಳ ಪೂರ್ಣಫಲ ದಕ್ಕುವುದಕ್ಕೆ ಗಾನವು ಪೂರಕವಾಗಿದೆ.

**ಸ್ಮಾರ್ತಕರ್ಮಗಳಲ್ಲಿ ಸಂಗೀತ**

ಸ್ಮಾರ್ತಕರ್ಮಗಳು ಹಲವಾರು ಬಗೆಯವು. ಭಾರತೀಯ ಪರಂಪರೆಯಲ್ಲಿ ಮುಖ್ಯವಾಗಿ ಷೋಡಶ ಸಂಸ್ಕಾರಗಳನ್ನು, ಅದರ ವಿಧಿ-ವಿಧಾನಗಳನ್ನು ಹಲವಾರು ಸ್ಮೃತಿಗಳು ವಿಸ್ತರಿಸುತ್ತವೆ. ಒಂದು ಶಿಶುವು ಹುಟ್ಟುವುದಕ್ಕೆ ಮುಂಚೆಯಿಂದ ಹಿಡಿದು ಮರಣಾನಂತರ ಮಾಡುವ ಅಷ್ಟೂ ಕ್ರಿಯೆಗಳು ಈ ಷೋಡಶ ಸಂಸ್ಕಾರಗಳಲ್ಲಿ ಜರುಗುತ್ತದೆ. ಗರ್ಭಾದಾನದಿಂದ ಮೊದಲುಗೊಂಡು ಅಂತ್ಯೇಷ್ಟಿಯವರೆಗೆ ಈ ಸಂಸ್ಕಾರಗಳಿವೆ. ಕೆಲವು ಸೂತ್ರಕಾರರು 11, 13 - ಹೀಗೆ ಸಂಸ್ಕಾರಗಳ ಸಂಖ್ಯೆಗಳನ್ನು ಉಲ್ಲೇಖಿಸುತ್ತಾರೆ. ಪ್ರತಿಯೊಂದು ಸಂಸ್ಕಾರದಲ್ಲಿ ಬರುವ ವಿವರಣೆ ಮತ್ತು ಆಚರಣೆಗಳಿಗೆ ತಕ್ಕುದಾದ ಹಾಡುಗಳನ್ನು ಆಯಾ ಮಂತ್ರೋಚ್ಚಾರಣಕಾಲದಲ್ಲಿಯೇ ಹಾಡುತ್ತಿದುದನ್ನು ಇಂದಿಗೂ ಪ್ರತ್ಯಕ್ಷವಾಗಿ ಕಂಡವರೂ ಇದ್ದಾರೆ. ಪುರೋಹಿತನು ಆಯಾ ಸಂದರ್ಭಕ್ಕೆ ತಕ್ಕ ಮಂತ್ರಗಳನ್ನು ಉಚ್ಚರಿಸಿದಾಗ ಈ ಸಂಪ್ರದಾಯ ಗೀತೆಗಳನ್ನೂ ಆಯಾ ಮನೆಯವರು ಹಾಡುತ್ತಿದ್ದರು. ಇವುಗಳನ್ನು ಶಾಸ್ತ್ರದ ಹಾಡು ಎನ್ನಬಹುದು. ಈ ಹಾಡುಗಳು ಪರಂಪರಾನುಗತ ಸಂಪ್ರದಾಯವನ್ನು ಮುಂದಿನ ತಲೆಮಾರಿಗೆ ತಲುಪಿಸಲು ಅತ್ಯಂತ ಸುಮಧುರವೂ ಸುಲಲಿತವೂ ಆದ ಸಾಧನವಾಗಿದ್ದಿತು. ಕೆಲವು ಪದ್ಧತಿಗಳು ಶಾಸ್ತ್ರೋಕ್ತವಲ್ಲದಿದ್ದರೂ ಆಯಾ ಪ್ರಾಂತೀಯ ಪ್ರಭಾವಕ್ಕೊಳಪಟ್ಟು ಆಚರಣೆಗೆ ಬಂದಾಗ ಅವುಗಳ ಮಾಹಿತಿ ಈ ರೀತಿಯ ಸಂಪ್ರದಾಯ ಗೀತೆಗಳಿಂದ ಸಿಕ್ಕುತ್ತದೆ. ಈ ಹಾಡುಗಳಲ್ಲಿನ ಸಾಹಿತ್ಯವು ಆಯಾ ಸಂಸ್ಕಾರವು ಯಾರಿಗೆ ನಡೆಯುತ್ತದೋ, ಅವರನ್ನು ಉದ್ದೇಶಿಸಿ ಅವರ ಮೇಲೆ ದೇವರನ್ನು ಆರೋಪಿಸಿ ಇರುವಂತಹುದು. ಉದಾಹರಣೆಗೆ ಹುಡುಗನಿಗೆ ಉಪನಯನವಾದಾಗ ವಟುವನ್ನುದ್ದೇಶಿಸಿ ಇರುವ ಹಾಡುಗಳಲ್ಲಿ ವಟುವಿನ ಜಾಗದಲ್ಲಿ ಕೃಷ್ಣನೋ, ರಾಮನೋ ಇರುವಂತೆ ರಚನೆಗಳು ಇರುತ್ತವೆ.
ಸಂಸ್ಕಾರಗಳಲ್ಲಿ ಮುಖ್ಯವಾದದ್ದೂ ವಿಸ್ತೃತವಾದದ್ದೂ ಆದ ವಿವಾಹ ಸಂಸ್ಕಾರವು ಆಯಾ ಪ್ರಾಂತದ ಮತ್ತು ಆಯಾ ವೇದಶಾಖೆಗಳ ಆಧಾರದ ಮೇಲೆ ಬೇರೆ ಬೇರೆಯಾಗಿ ತೋರಿಬಂದರೂ, ಪ್ರತಿಯೊಂದು ಪದ್ಧತಿಯಲ್ಲಿಯೂ, ಮಂತ್ರಗಳಿಗೆ ಸಂವಾದಿಯಾದ ಸಂಗೀತ ರಚನೆಗಳನ್ನು ಕಾಣಬಹುದು. ಗಣೇಶ-ಶಾರದಾ-ಗುರುಪ್ರಾರ್ಥನೆಯೊಂದಿಗೆ ಆರಂಭವಾಗುವ ಈ ಹಾಡುಗಳು ಚಿಕ್ಕ ಚಿಕ್ಕ ಕ್ರಿಯೆಗಳನ್ನೂ ಉಲ್ಲೇಖಿಸುತ್ತದೆ. ಹಸೆಗೆ ಕರೆಯುವ ಹಾಡು, ಬಾಸಿಂಗ ಕಟ್ಟುವಾಗ ಹಾಡುವ ಹಾಡು, ಕಾಶೀಯಾತ್ರೆಯ ಹಾಡು, ಶುಭಶಕುನಗಳನ್ನು ಹಾರೈಸುವ ಹಾಡು, ಉಡಿತುಂಬುವ ಹಾಡು - ಹೀಗೆ ಎಲ್ಲ ಆಚರಣೆಗಳನ್ನೂ ಸಂಭ್ರಮಿಸುವ ಹಾಡುಗಳು ಲಭ್ಯವಿದೆ. ಈ ಹಾಡುಗಳು ಸಾಂಗತ್ಯ, ತ್ರಿಪದಿ, ಆರ್ಯೆಗಳಲ್ಲಿ ಸಾಮಾನ್ಯವಾಗಿ ನಿಯೋಜಿತವಾಗಿರುತ್ತವೆ. ಭಾಷೆಯು ಗ್ರಾಮೀಣ ಸೊಗಡಿನಿಂದ ಕೂಡಿದ್ದೂ ಆಗಿರಬಹುದು, ಅಥವಾ ದೇವರನಾಮಗಳನ್ನು ಅನುಸರಿಸಿದಂತೆ ಶಿಷ್ಟಸಾಹಿತ್ಯದಂತೆಯೂ ಇರಬಹುದು.

ಕಳಸಾ ತಕ್ಕೊಳ್ಳೆ ಕಳೆಯುಳ್ಳ ಮುತ್ತೈದೆ
ವರುಷಕೆ ನೂರು ಮದುವೆ[ಯು]-ಯಾಗಲೆಂದು
ಹರಸಿ ತಕ್ಕೊಳ್ಳೆ ಕಳಸವ
ಬಾಗಲ ಬಿಟ್‌ಹೊಳ್ಡುವಗ ಬಾಳೆ ಪಲ್ಲೈಸ್ಯಾವೇ
ಬಾಗಿಲ ಗೌಳಿ ನುಡಿದಾವೆ - ಮದಲಿಂಗನ
ತಂಗ್ಯವ್ ತಕ್ಕೊಳ್ಳೆ ಕಳಸವ
ನೆನೆಯಕ್ಕಿ ನೆನಗಡಲೆ ಗೊನೆ ಮುರಿದ ಬಾಳೇಹಣ್ಣು
ಗಂಗೆ ದಿಡಕ್‌ಹೋಗಿ ನೆಲೆನಿಂತು - ಮುತ್ತೈದೇರು
ಗಂಗವ್ವ ಪೂಜಿ ಹೊರುತಾರೆ
ಉದ್ದಿನ ಕಾಳಷ್ಟೆ ಬಿದ್ ಮಣ್ಣ ತಕ್ಕಂಡೆ
ಹುಗ್ಗಿ ಬಂದಾಲ ಗೇದಾರು - ಈ ಮನೆಯ
ಜಾಣೆ ತಂಗಮ್ಮ ಮದುವೆಗೆ
ಶೆಟ್ಟರ್ಹಟ್ಟೀ ಮುಂದೆ ಗಟ್ಟಿ ಜಲ್ಲುಪ್ಪರಿಗೆ
ಮೇಲೋಂದು ಅಂಕಣದ ಹೊಸ ಬಾವಿ - ಒಳಗಿರುವೊ
ಗಂಗವ್ ಕಳಸದಲಿ ಹೊಳೆದಳು

ಈ ರೀತಿಯಾದ ಹಾಡುಗಳು ಜನಪದ ಶೈಲಿಯಲ್ಲಿ ಇರುವುದೆಂದು ಅಶಾಸ್ತ್ರೀಯವೆಂದು ಹೇಳಲಾಗುವುದಿಲ್ಲ. ಇವುಗಳ ಮಟ್ಟುಗಳು ಮತ್ತು ರಾಗಗಳನ್ನು ಗಮನಿಸಿದಾಗ ಇಂದೂ ಬಳಕೆಯಲ್ಲಿರುವ ಕಾವ್ಯಗಳನ್ನು ಮತ್ತು ಸಂಗೀತವನ್ನು ಹೋಲುತ್ತದೆ.

ಆಕಾಶ ಚಪ್ಪರ ಮಾಮೇರು ಮಂಟಪ
ಲೋಕ ಲೋಕಾದಿಂದ ನಿಬ್ಬಣ ಬರಲಿ
ಬೇಕಾದ ಕನಕ ಕಲ್ಪವೃಕ್ಷದ
ಕಾಂತೇರು ಬಂದು ಸಾಕ್ಷಿಯ ತಳಿರೇ
ಕಲ್ಯಾಣಾ ಗಿರಿಜೇ ಕಲ್ಯಾಣಾ

ಇದೇ ರೀತಿ ಮಲನೀರಿಗೆ, ಕಾಶೀಯಾತ್ರೆಗೆ, ಉರುಟಣೆಗೆ, ಧಾರೆಗೆ, ಬೀಗರನ್ನು ಎದುರುಗೊಳ್ಳುವುದಕ್ಕೆ - ಎಲ್ಲಕ್ಕೂ ಹಾಡುಗಳು ಲಭ್ಯವಿದೆ. ಕೆಲವೊಮ್ಮೆ ಪುರೋಹಿತರಿಗೂ ಮಾರ್ಗದರ್ಶಿಯಾಗಿ ಈ ಹಾಡುಗಳಿ ಇರಬಲ್ಲವು. ಒಟ್ಟಾರೆಯಾಗಿ ಸ್ಮಾರ್ತಕರ್ಮಗಳ

ಪ್ರಯೋಗ, ಆಚರಣೆಗಳು, ಆಯಾ ಪ್ರಾಂತೀಯ ಸಂಪ್ರದಾಯ – ಎಲ್ಲವನ್ನೂ ಹಿಡಿದಿಡುವ ಈ ಹಾಡುಗಳು ಜನಮಾನಸದ ಸ್ಮೃತಿಯಲ್ಲಿ ಉಳಿದಿದೆ.

**ಹಬ್ಬ-ಹರಿದಿನಗಳಲ್ಲಿ ಸಂಗೀತ**

ಭಾರತೀಯರು ಸುಖಸಂತೋಷಕ್ಕಾಗಿ ಧರ್ಮಮಾರ್ಗದ ಮೂಲಕ ಪಥವನ್ನು ಕಂಡುಕೊಂಡವರು. ನಮ್ಮ ಸಂಸ್ಕೃತಿಯ ಹಲವಾರು ಹಬ್ಬದ ಆಚರಣೆಗಳು ಇದನ್ನು ಪ್ರತಿಬಿಂಬಿಸುತ್ತದೆ. ಯುಗಾದಿಯಿಂದ ಮೊದಲುಗೊಂಡು ಶಿವರಾತ್ರಿಯವರೆಗೆ ದ್ವಾದಶ ಮಾಸಗಳಲ್ಲಿ ಪೂರ್ತಿಯಾಗಿ ಹಂಚಿಹೋಗಿರುವ ಈ ಹಬ್ಬಗಳ ಸಾಲು ಭಾರತೀಯತ್ವಕ್ಕೆ ಒಂದು ಕೈಗನ್ನಡಿ. ಸಂಸ್ಕೃತ ಕವಿಗಳೂ ಹಬ್ಬಗಳ ಕುರಿತಾದ ಸೊಗಸಾದ ಸಾಹಿತ್ಯವನ್ನು ರಚಿಸಿದ್ದಾರೆ. ಹರ್ಷನ ರತ್ನಾವಳಿಯಲ್ಲಿ ವಸಂತೋತ್ಸವದ ಸಮಯದಲ್ಲಿ **"ಚರ್ಚರೀ"**ಯನ್ನು ಹಾಡುತ್ತಾ ಇದ್ದುದಾಗಿ ವರ್ಣನೆಯಿದೆ. ಮದನೋತ್ಸವವನ್ನು ಕುರಿತೂ ಇದು ಮಾತನಾಡುತ್ತದೆ. ವಸಂತ ಋತುವಿನ ವರ್ಣನೆ, ಮದನೋತ್ಸವದ ಪ್ರಸಂಗಗಳು ಕಾಳಿದಾಸಾದಿ ಅನೇಕ ಕವಿಗಳ ಕೈಚಳಕದಲ್ಲಿ ರಮ್ಯವಾಗಿ ಮೂಡಿಬಂದಿದೆ. ಇಂತಹ ಸಂದರ್ಭಗಳಲ್ಲಿಯೂ ಸಂಗೀತದ ಪ್ರಯೋಗ ಕಂಡುಬರುತ್ತದೆ. ಇಂದ್ರಧ್ವಜೋತ್ಸವವೂ ಪ್ರಾಚೀನ ಭಾರತದಲ್ಲಿ ಇದ್ದ ಪ್ರಮುಖವಾದ ಹಬ್ಬ. ತಮಿಳಿನಿಂದ ಹಿಡಿದು ಸಂಸ್ಕೃತದವರೆಗೆ ಅನೇಕ ಭಾಷೆಗಳಲ್ಲಿ ಇದರ ಉಲ್ಲೇಖ ಕಂಡುಬರುತ್ತದೆ. ಸಮುದ್ರ ಮಂಥನದ ಪ್ರಥಮ ನಾಟ್ಯವು ಈ ಸಂದರ್ಭದಲ್ಲಿ ನಡೆಯುತ್ತಿತ್ತೆಂದು ನಾಟ್ಯಶಾಸ್ತ್ರದಲ್ಲಿಯೇ ಉಲ್ಲೇಖವಿದೆ. ಇಂದ್ರಧ್ವಜೋತ್ಸವದಲ್ಲಿಯೇ ಭಾರತೀಯ ನಾಟ್ಯವು ಮೂಲವನ್ನು ಹೊಂದಿದೆ. ಇಲ್ಲಿ ನಾಟ್ಯವೆಂದರೆ ನೃತ್ತ, ನೃತ್ಯ ಮತ್ತು ಗೀತೆಗಳು ಸೇರಿಕೊಂಡಿರುತ್ತವೆ. ನಾಟ್ಯ ಶಾಸ್ತ್ರದ ಕಾಲದಲ್ಲಿ ಸಂಗೀತವು ನಾಟ್ಯಕ್ಕೆ ಪೂರಕವಾಗಿ ಇದ್ದಿತು. ನಾಟ್ಯಶಾಸ್ತ್ರದ ಮೊದಲನೇ ಅಧ್ಯಾಯದ ಐವತ್ ಮೂರನೇ ಶ್ಲೋಕದಲ್ಲಿ ಇಂದ್ರಧ್ವಜೋತ್ಸವದ ಉಲ್ಲೇಖ ದಕ್ಕುತ್ತದೆ. ಪ್ರಪ್ರಥಮವಾಗಿ ನಾಟ್ಯದ ಮತ್ತು ರಂಗಮಂಟಪದ ಬಳಕೆ ಈ ಹಬ್ಬದಿಂದಲೇ ಆರಂಭವಾದುದಾಗಿ ತಿಳಿದುಬರುತ್ತದೆ. ಭಾರತೀ, ಸಾತ್ತ್ವತೀ, ಆರಭಟೀ ಹಾಗೂ ಕೈಶಿಕೀ ಶೈಲಿಗಳು ಈ ಸಂದರ್ಭದಲ್ಲಿ ಬಳಕೆಯಲ್ಲಿದ್ದವು. ಬಿದಿರಿನ ಕೋಲನ್ನು ಇಂದ್ರಧ್ವಜವೆಂದು ಪೂಜಿಸುವ ಈ ಹಬ್ಬದಲ್ಲಿ ನಾಟ್ಯವೇ ಪ್ರಧಾನ. ಇಂದ್ರ ಮತ್ತು ಕೋಲಿನ ಸಂಕೇತವು ವೈದಿಕ ಕಾಲದಿಂದಲೂ ನಡೆದುಬಂದುದಾಗಿ ತಿಳಿದುಬರುತ್ತದೆ. ಅದರ ಮುಂದುವರೆದ ಭಾಗವಾಗಿ ಇಂದ್ರಧ್ವಜವೆಂಬ ಹಬ್ಬವು ಮೂಡಿದೆ.

ಇಂದು ಆಚರಣೆಯಲ್ಲಿರುವ ಹಬ್ಬಗಳ ಕುರಿತಾದ ಸಂಗೀತವೂ ವಿಪುಲವಾಗಿಯೇ ಇದೆ. ಸೋಮದೇವನ ಯಶಸ್ತಿಲಕ ಚಂಪೂವಿನಲ್ಲಿ ದೀಪಾವಳಿಯ ಕುರಿತಾದ ವಿವರಣೆಯಿದೆ. ನರಕ ಚತುರ್ದಶಿಯಂದು ಅಭ್ಯಂಜನ, ಅಮಾವಾಸ್ಯೆಯ ಲಕ್ಷ್ಮೀ ಪೂಜೆ, ಬಲಿಪಾಡ್ಯಮಿಯ ಬಲೀಂದ್ರನ ಆಗಮನ, ಸಗಣಿಯಲ್ಲಿ ಕೋಟೆಯ ನಿರ್ಮಾಣ, ಬಲೀಂದ್ರ ಪೂಜೆ – ಇವೆಲ್ಲವುಗಳ ಬಗ್ಗೆ ಸಂಪ್ರದಾಯ ಗೀತೆಗಳಿವೆ.

ಸತ್ಯವ ಮೆರೆಸಬೇಕೆನುತ
ತಾನುದಿಸಿದ ಶ್ರೀ ಹರಿಯು
ಅದಿತಿ ದೇವಿಗೆ ಮಗನಾಗಿ
ಭರದಲಿ ಧರಯೊಳಗೆ
ಲೇಸು ಲೇಸೆನುತಲೆ ತಾಯೇ
ನಿನ್ನುದರದಿ ನಾ ಜನಿಸಿ**ದೆನು**
ಮೂರಡಿ ದಾನವ ಬೇಡುವೆ
ಧರೆಯೊಳಗೆಂದ
ಬಂದನೆ ಬಲಿ ಅರಮನೆಗೆ
ನಿಂದು ಕೇಳಿದ ಮೂರಡಿಯ
ಧರುಣಿಯನು ನೆವ ಮಾತ್ರದಿ
ಕೊಡು ಎಂದೆನುತ
ಆ ಮಾತ ಕೇಲುತ ಹರಿಯ
ಮೂರಡಿ ಧಾರುಣಿಗಳನು
ಪ್ರೇಮದಿ ಬಲಿಯೇಂದ್ರನು
ಕೊಟ್ಟನೆ ದಾನವನು
ಆಗ ಮೂರಡಿ ಧಾರುಣಿಯು
ಸಾಲದೆ ಮನದಲಿ ನಗುತ
ಶಿರ ಒಡ್ಡಿದ ಬಲಿಯೇಂದ್ರ
ಪಾತಾಳಕೆ ಇಳಿದ
ಪಾತಾಳಕೆ ಇಳಿದ್ ಬಂದ
ಬಲಿಯೇಂದ್ರನ ಅರಮನೆಯ
ಬಾಗಿಲ ಕಾಯ್ದನೆ ಹರಿಯು
ಅತಿ ಹರುಷದಲಿ

ಈ ಹಾಡುಗಳು ಇಂದು ಶಾಸ್ತ್ರೀಯ ಸಂಗೀತದಲ್ಲಿ ಬಳಸುವ ರಾಗಗಳಾದ ಅಠಾಣ, ಆನಂದಭೈರವಿ, ಅಭೇರಿ, ಕಲ್ಯಾಣಿ, ಕಮಾಚ್, ಕಾಮವರ್ಧಿನಿ, ಖರಹರಪ್ರಿಯ, ಜಂಝೂಟಿ, ಕಾಪಿ, ಕುರಂಜಿ, ಕಾನಡ, ಕದನಕುತೂಹಲ ಮುಂತಾದ ರಾಗಗಳಲ್ಲಿ ಸಂಯೋಜಿತವಾಗಿರುತ್ತದೆ. ಶಾಸ್ತ್ರದ ಹಾಡುಗಳು ಸಂಯೋಜಿತವಾಗಿರುವ ಎಪ್ಪತ್ತೆಂಟು ರಾಗಗಳನ್ನು ಮಹಾಮಹೋಪಾಧ್ಯಾಯ ಡಾ. ರಾ ಸತ್ಯನಾರಾಯಣ ಅವರು ಗುರುತಿಸಿದ್ದಾರೆ. ಇವೆಲ್ಲವೂ ಇಂದೂ ಬಳಕೆಯಲ್ಲಿರುವ ರಾಗಗಳೇ. ಇದು ಭಾರತೀಯ ಸಂಗೀತದ ಪ್ರಭಾವ ನಮ್ಮ ಸಂಸ್ಕೃತಿಯ ಆಚರಣೆಗಳಲ್ಲಿ ಎಷ್ಟರ ಮಟ್ಟಿಗೆ ಹಾಸುಹೊಕ್ಕಾಗಿದೆ ಎಂಬುದಕ್ಕೆ ಒಂದು ನಿದರ್ಶನ.

**ಮುಂದಿನ ಸವಾಲುಗಳು**

ಶ್ರೌತ-ಸ್ಮಾರ್ತಪ್ರಯೋಗಗಳು ಇಂದು ಬಹಳ ವಿರಳವಾಗುತ್ತಿವೆ. ಸೋಮಯಾಗಗಳು ಅಲ್ಲೊಂದು-ಇಲ್ಲೊಂದು ಹೊರತುಪಡಿಸಿ ಬೇರೆಡೆಗಳಲ್ಲಿ ಅಷ್ಟಾಗಿ ನಡೆಯುತ್ತಿಲ್ಲ. ಇದರಿಂದ ವೇದವಿದ್ಯೆ ನಷ್ಟವಾಗುವುದರ ಜೊತೆಗೆ ನಾದವಿದ್ಯೆಯೂ ನಷ್ಟವನ್ನು ಅನುಭವಿಸುತ್ತಿದೆ. ಸಹಸ್ರಕ್ಕಿಂತಲೂ ಹೆಚ್ಚಿನದಾಗಿದ್ದ ಸಾಮವೇದದ ಶಾಖೆಗಳು ಇಂದು ಬೆರಳೆಣಿಕೆಯಷ್ಟು ಮಾತ್ರ ಲಭ್ಯವಿದೆ. ಹಲವಾರು ಪ್ರಯೋಗಗಳು ಕಾಲಚಕ್ರಕ್ಕೆ ಸಿಲುಕಿ ನಶಿಸಿಹೋಗಿವೆ. ಇನ್ನು ಸಂಸ್ಕಾರ ಕರ್ಮಗಳಲ್ಲಿಯೂ ಆಯಾ ಸಂದರ್ಭದ ಹಾಡುಗಳು ಒಂದೆ ಕಡೆಯಾದರೆ, ಮೂಲ ಕ್ರಮವೇ ನಷ್ಟವಾಗುವ ಪರಿಸ್ಥಿತಿ ಒದಗಿದೆ. ಆಚರಣೆಗಳ ಕಾಠಿಣ್ಯವನ್ನು ಮಾತ್ರ ಮನದಲ್ಲಿರಿಸಿಕೊಂಡು ಆಯಾ ಕರ್ಮಗಳ ಕ್ರಮಗಳನ್ನು ಕ್ರಮೇಣ ಕೈಬಿಡಲಾಗುತ್ತಿದೆ. ಇದಕ್ಕೆ ಶಾಸ್ತ್ರದ ಹಾಡುಗಳೂ ಹೊರತಲ್ಲ. ಮೂರ್ನಾಲ್ಕು ತಲೆಮಾರಿನ ಹಿಂದೆ ಎಲ್ಲರಿಗೂ ಅವಗತವಾಗಿದ್ದ ಸಂಪ್ರದಾಯದ ಹಾಡುಗಳು ಇಂದು ಬಹುತೇಕ ಮರೆಯಾಗಿವೆ.

ಇನ್ನು ಹಬ್ಬಗಳ ವಿಚಾರದಲ್ಲಿಯೂ ಬಹಳಷ್ಟು ನಷ್ಟವಾಗಿರುವುದು ವಿದಿತವೇ. ಕಾಲಗತಿಯಿಂದ ಪ್ರಾಚೀನ ಹಬ್ಬಗಳನ್ನು ಬಿಟ್ಟು ಇತರ ಹಬ್ಬಗಳು ಪ್ರಾಮುಖ್ಯಕ್ಕೆ ಬಂದರೂ, ಸದ್ಯದ ಪರಿಸ್ಥಿತಿಯಲ್ಲಿ ಅವುಗಳ ಉಳಿವೂ ಪ್ರಶ್ನಾರ್ಥಕವಾಗಿಯೇ ಇದೆ. ಸಂಗೀತ ತ್ರಿಮೂರ್ತಿಗಳ ರಚನೆಗಳಲ್ಲಿಯೂ ಹಬ್ಬಗಳ ಉಲ್ಲೇಖ ಇಲ್ಲದಿಲ್ಲ. ದೀಕ್ಷಿತರ ಚಾಮರ

ರಾಗದ **"ಸಿದ್ಧಿವಿನಾಯಕಂ ಅನಿಶಂ"** ಕೃತಿಯಲ್ಲಿ "ಭಾದ್ರಪದಮಾಸ ಚತುರ್ಥ್ಯಾಂ ಬ್ರಾಹ್ಮಣಾದಿ ಪೂಜಿತಂ" ಎಂಬ ವಾಕ್ಯವನ್ನು ಇಲ್ಲಿ ಉದಾಹರಿಸಬಹುದು.

ಕಲಾವಿದರು, ಪ್ರವಚನಕಾರರು, ಭಾಷಣಕಾರರು, ಶಿಕ್ಷಕರು, ಸಂಗೀತಜ್ಞರು ಮತ್ತು ಆಲಂಕಾರಿಕರಾದರೂ ಈ ಭವ್ಯ ಪರಂಪರೆಯ ಉಳಿವಿಗೆ ಯತ್ನಿಸಬೇಕಾಗಿದೆ. ಪ್ರವಚನಗಳಲ್ಲಿ ಪ್ರಾತ್ಯಕ್ಷಿಕೆಗಳನ್ನು ಹೆಚ್ಚಾಗಿ ಒಳಗೊಳ್ಳುವ ಮೂಲಕ ಸಂಪ್ರದಾಯದ ಹಾಡುಗಳನ್ನು ಪುನರುಜ್ಜೀವಗೊಳಿಸಬಹುದು. ಹಬ್ಬಗಳ ಅಂಗವಾಗಿ ಸಂಗೀತ ಕಚೇರಿಗಳ ಏರ್ಪಾಡಾದಾಗ ಸಂಪ್ರದಾಯ ಗೀತೆಗಳ ಕಾರ್ಯಕ್ರಮವನ್ನೂ ಉತ್ತೇಜಿಸುವುದು ಅತ್ಯವಶ್ಯ. ಸಂಗೀತಜ್ಞರು ರಾಗನಿವೇಶಿತವಾದ ಸಂಪ್ರದಾಯದ ಹಾಡುಗಳನ್ನು ಧಾತು ಸಂಯೋಜನೆ ಮಾಡಿ ಹಾಡಲು ಸಾಧ್ಯವಿದೆ. ಕಾವ್ಯಾಭ್ಯಾಸಿಗಳು ವಿವಿಧ ಕಾವ್ಯಗಳಲ್ಲಿ ಬರುವ ಯಜ್ಞಗಳ ವಿವರಣೆ, ಹಬ್ಬಗಳ ವಿವರಣೆ ಮುಂತಾದುವುಗಳನ್ನು ಇರಿಸಿಕೊಂಡು ಒಂದು ಕಲ್ಪನಾಲೋಕದಲ್ಲಿಯಾದರೂ ಅವುಗಳನ್ನು ಮರುಸೃಷ್ಟಿಸಿದರೆ ಅದು ಅನುಪಮವಾದ ಸಂಗತಿಯಾಗುತ್ತದೆ. ಸೋಮಯಾಗದ ಸಾಮಗಾನವು ಪ್ರವಚನಗಳಲ್ಲಿ ಬಳಸದೇ ಹೋದರೂ, ಈಗ ಸೋಮಯಾಗ ನಡೆಯುತ್ತಿರುವ ಕಡೆಗಳಲ್ಲಿ ಧ್ವನಿಮುದ್ರಿಕೆಗಳನ್ನು ಮಾಡುವುದರ ಮೂಲಕ ಅದರ ಸಂರಕ್ಷಣೆಯನ್ನು ಮಾಡಬಹುದು. ಭವ್ಯ ಭಾರತೀಯ ಪರಂಪರೆಯ ಅವಿಭಾಜ್ಯ ಅಂಗವಾದ ನಾದೋಪಾಸನೆಯನ್ನು ಕಾಲಕಾಲಕ್ಕೆ ಆಯಾ ಶತಮಾನಗಳ ಸಾಧಕರು ಎತ್ತಿಹಿಡಿಯುತ್ತಲೇ ಇದ್ದಾರೆ. ಪ್ರಸ್ತುತ ಲೋಕದ ಜನರಿಗೆ ಬಳುವಳಿಯಾಗಿ ಬಂದಂತಹ ಈ ಭಂಡಾರವನ್ನು ರಕ್ಷಿಸಿ ಮುಂದಿನ ತಲೆಮಾರುಗಳಿಗೆ ತಲುಪಿಸುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವಾಗಿದೆ. ವಿಶೇಷವಾಗಿ ಶಿಕ್ಷಣ ಕ್ಷೇತ್ರದಲ್ಲಿರುವ ಸಾಧಕರು ತಮ್ಮ ಅಧ್ಯಯನ-ಅಧ್ಯಾಪನಗಳಿಂದ ಅಪಾರ ಯುವಜನಸ್ತೋಮವನ್ನು ತಲುಪಿ ಈ ರತ್ನಭಂಡಾರವನ್ನು ಕಾಪಿಡುವಲ್ಲಿ ಕಾರ್ಯಪ್ರವೃತ್ತರಾಗಬೇಕಾಗಿದೆ.

## ಆಕರ ಗ್ರಂಥಗಳು


1. ಶ್ರೀ ಜಯಚಾಮರಾಜೇಂದ್ರ ವೇದರತ್ನಮಾಲಾ, ಋಗ್ವೇದ ಸಂಹಿತಾ, ಭಾಗ-1, ಆಸ್ಥಾನ ಮಹಾವಿದ್ವಾನ್ ಎಚ್.ಪಿ. ವೆಂಕಟ ರಾವ್, ಶ್ರೀ ಚಾಮುಂಡೇಶ್ವರಿ ಎಲೆಕ್ಟ್ರಿಕಲ್ ಪ್ರೆಸ್, ಮೈಸೂರು, 1948.
2. ಶ್ರೀ ಜಯಚಾಮರಾಜೇಂದ್ರ ವೇದರತ್ನಮಾಲಾ, ಋಗ್ವೇದ ಸಂಹಿತಾ, ಭಾಗ-2, ಆಸ್ಥಾನ ಮಹಾವಿದ್ವಾನ್ ಎಚ್.ಪಿ. ವೆಂಕಟ ರಾವ್, ಶ್ರೀ ಚಾಮುಂಡೇಶ್ವರಿ ಎಲೆಕ್ಟ್ರಿಕಲ್ ಪ್ರೆಸ್, ಮೈಸೂರು, 1949.
3. ಶ್ರೀ ಶಾರ್ಙ್ಗದೇವ ವಿರಚಿತ ಸಂಗೀತ ರತ್ನಾಕರ, "ನಿಃಶಂಕಹೃದಯ"ವೆಂಬ ಕನ್ನಡ ವ್ಯಾಖ್ಯಾನ ಸಮೇತ, ಸಂಪುಟ 1, ಭಾಗ 1, ಮಹಾಮಹೋಪಾಧ್ಯಾಯ ಡಾ. ರಾ. ಸತ್ಯನಾರಾಯಣ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1968.
4. Festivals, Sports and Pastimes of India, Dr V Raghavan, B. J Institute of Learning and Research, Ahmedabad, 1979.
5. ಕರ್ನಾಟಕದ ಕಲೆಗಳು, ಎರಡನೆಯ ಸಂಪುಟ, ಸಂಗೀತ [ಭಾಗ-1], ಮಹಾಮಹೋಪಾಧ್ಯಾಯ ಡಾ. ರಾ. ಸತ್ಯನಾರಾಯಣ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1983.
6. ಸಂಗೀತ : ಇತಿಹಾಸ-ಪರಂಪರೆ, ವಿದ್ಯಾಲಂಕಾರ ಪ್ರೊ॥ ಎಸ್. ಕೆ ರಾಮಚಂದ್ರ ರಾವ್, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, 1993.
7. ಗಾನಕಲಾ ಮಂಜರಿ ಸಂಪುಟ 1, ಸಂ: ಬಿ ವಿ ಕೆ ಶಾಸ್ತ್ರೀ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, 1995.
8. ಗಾನಕಲಾ ಮಂಜರಿ ಸಂಪುಟ 2, ಸಂ: ಬಿ ವಿ ಕೆ ಶಾಸ್ತ್ರೀ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, 1998.
9. ಕರ್ಣಾಟಕಸಂಗೀತವಾಹಿನಿ, ಮಹಾಮಹೋಪಾಧ್ಯಾಯ ಡಾ. ರಾ. ಸತ್ಯನಾರಾಯಣ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2001.
10. ಧಾರ್ಮಿಕ ಸಂಸ್ಕಾರಗಳಲ್ಲಿ ಸಂಗೀತ, ಮಹಾಮಹೋಪಾಧ್ಯಾಯ ಡಾ. ರಾ. ಸತ್ಯನಾರಾಯಣ, ಅಭಿಜ್ಞಾನ, ಬೆಂಗಳೂರು, 2005.
11. ಹೊನ್ನ ಹೊತ್ತಿಗೆ, ಸಂ: ಮತಿಘಟ್ಟ ಕೃಷ್ಣಮೂರ್ತಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, 2007.
12. ವೇದದಲ್ಲಿ ಸಂಗೀತ, ವಿದ್ವಾನ್ ಡಾ. ಸಿ.ಎ. ಶ್ರೀಧರ, ಸಂಸ್ಕೃತಿ ಪಬ್ಲಿಷಿಂಗ್ ಹೌಸ್, ಮೈಸೂರು, 2015.
13. Collected Writings on Indian Music, Vol-I-III, Dr V Raghavan, Dr V Raghavan Centre for Performing Arts, Chennai, 2020.